ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 13-08-2018

# ವರದಿ

## ಪುಸ್ತಕಕ್ಕೆ ಪರ್ಯಾಯವಿಲ್ಲ

**ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ ಉದ್ಘಾಟಿಸಿ ಶ್ರೀ ಆರ್ ಕೆ ಮಧು ಸಹಮತ**

ಕೊಳ್ಳೇಗಾಲ : ಆಗಸ್ಟ್ 13 : ಪುಸ್ತಕ ಮತ್ತು ಓದು ಉನ್ನತಿಗೆ ಇರುವ ರಹದಾರಿ. ಪುಸ್ತಕಕ್ಕೆ ಪರ್ಯಾಯವಿಲ್ಲ. ವಿದ್ಯಾರ್ಥಿ ಸಮೂಹ ಸತ್ಯವನ್ನು ಅರ್ಥೈಸಿಕೊಂಡು ಸಾರ್ಥಕತೆಯ ಹಾದಿ ತುಳಿಯಬೇಕು ಎಂದು ಖ್ಯಾತ ವನ್ಯಜೀವಿ ಛಾಯಾಚಿತ್ರಗಾರರಾದ ಶ್ರೀ ಆರ್ ಕೆ ಮಧು ಅಭಿಪ್ರಾಯಿಸಿದರು.

ಪಟ್ಟಣದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ವತಿಯಿಂದ ಎಕೋ ಕ್ಲಬ್ ಆಶ್ರಯದೊಂದಿಗೆ ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ "ಪುಸ್ತಕದಿಂದ ಮಸ್ತಕ ಜ್ಞಾನ" ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ನೀಡುತ್ತಾ ಮಾತನಾಡಿದರು.

ಪುಸ್ತಕಗಳು ಪ್ರಚಲಿತ ವಿಧ್ಯಮಾನದ ಜೊತೆಗೆ ಜ್ಞಾನ ಭಂಡಾರವುಳ್ಳ ಪಾಂಡಿತ್ಯದ ಆಲೋಚನೆ ಹಾಗೂ ಕಲ್ಪನೆಗಳನ್ನು ಜನತೆಗೆ ತಲುಪಿಸುವ ಮಾಯಾಂಗಿ ಕಿಟಕಿಗಳಿದ್ದ ಹಾಗೆ. ವಿದ್ಯಾರ್ಥಿಗಳು ಶಾಂತ ಚಿತ್ತತೆ ಕಾಯ್ದುಕೊಂಡು, ಜೀವನದ ಸೊಗಸನ್ನು ಅನುಭವಿಸುವುದರ ಜೊತೆಗೆ ನಿರಂತರ ಅಧ್ಯಯನ ದಾಸರಾಗಬೇಕೆಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ. ಉಮೇಶ ಗ್ರಂಥಾಲಯವು ಶಿಕ್ಷಣ ಸಂಸ್ಥೆಗಳ ಆತ್ಮವಿದ್ದಂತೆ. ಗ್ರಂಥಾಲಯವಿದ್ದಲ್ಲಿ ಜ್ಞಾನದ ಕಡಲು ಉಕ್ಕುತ್ತದೆ. ವಿದ್ಯಾರ್ಥಿಗಳಿಗೆ ಜ್ಞಾನದ ಬೆಳಕನ್ನು ನೀಡಿ ಅಜ್ಞಾನಿಗಳನ್ನು ಸುಜ್ಞಾನಿಗಳಾಗಿ ಮಾಡುವಂತಹ ಪವಿತ್ರ ಮಂದಿರ. ಪ್ರಸ್ತುತ ಕೌಶಲ್ಯಪೂರ್ಣ ಹಾಗೂ ಡಿಜಿಟಲ್ ಶಿಕ್ಷಣ ಕೊರತೆಯನ್ನು ನೀಗಿಸುವಲ್ಲಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರವು ಪ್ರಮುಖ ಪಾತ್ರವಹಿಸುತ್ತದೆ. ಪರಿಸರವನ್ನು ಸದಾ ಆರೋಗ್ಯಕರವಾಗಿರುವಂತೆ ನೋಡಿಕೊಳ್ಳಲು ಜಾಗೃತಿ ಮೂಡಿಸುವ ಸಲುವಾಗಿ ಕಾಲೇಜಿನಲ್ಲಿ "ಎಕೋ ಕ್ಲಬ್" ಸ್ಥಾಪಿಸಿ ತನ್ಮೂಲಕ ಯುವ ಸಮೂಹವನ್ನು ಪರಿಸರ ಸಂರಕ್ಷಣೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ವೇದಿಕೆಯಲ್ಲಿ ಗ್ರಂಥಪಾಲಕರಾದ ಶ್ರೀ ಶ್ರೀನಿವಾಸ್, ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಎಂ. ಪ್ರಭು, ಪರಿಸರ ಸಂರಕ್ಷಣೆ ಸಮಿತಿ ಸಂಚಾಲಕರಾದ ಪ್ರೊ. ಬಿ. ಮಂಜುನಾಥ್ ಹಾಗೂ ಗುಂಡ್ಲುಪೇಟೆ ತಾಲ್ಲೋಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀ ವಿ ಎನ್ ಚಿದಾನಂದ್‌ರವರು ಉಪಸ್ಥಿತರಿದ್ದರು.

ಕು. ಶಬರಿನ್ ಸ್ವಾಗತಿಸಿ, ವಂದಿಸಿದರು.

ಖ್ಯಾತ ವನ್ಯಜೀವಿ ಛಾಯಾಚಿತ್ರಗಾರರ ವನ್ಯ ಜೀವಿ ಛಾಯಾ ಚಿತ್ರಗಳ ಪ್ರದರ್ಶನವನ್ನು ವಿದ್ಯಾರ್ಥಿನಿಯರಿಗಾಗಿ ಆಯೋಜಿಸಲಾಗಿತ್ತು.

ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ವತಿಯಿಂದ ಎಕೋ ಕ್ಲಬ್ ಆಶ್ರಯದೊಂದಿಗೆ ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆಯ ಅಂಗವಾಗಿ "ಪುಸ್ತಕದಿಂದ ಮಸ್ತಕ ಜ್ಞಾನ" ಶ್ರೀ ಆರ್.ಕೆ ಮಧು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀ ವಿ ಎನ್ ಚಿದಾನಂದ, ಪ್ರಾಚಾರ್ಯ ಪ್ರೊ. ಉಮೇಶ, ಶ್ರೀ ಬಿ. ಮಂಜುನಾಥ್, ಡಾ. ಎಂ. ಪ್ರಭು ಹಾಗೂ ಶ್ರೀ ಶ್ರೀನಿವಾಸ್‌ರವರನ್ನು ಕಾಣಬಹುದು.



ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ವತಿಯಿಂದ ಎಕೋ ಕ್ಲಬ್ ಆಶ್ರಯದೊಂದಿಗೆ ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆಯ ಅಂಗವಾಗಿ "ಪುಸ್ತಕದಿಂದ ಮಸ್ತಕ ಜ್ಞಾನ" ಎಂಬ ವಿಷಯದ ಬಗ್ಗೆ ಶ್ರೀ ಆರ್ ಕೆ ಮಧುರವರು ಮಾತನಾಡುತ್ತಿರುವುದು. ಚಿತ್ರದಲ್ಲಿ ಶ್ರೀ ವಿ ಎನ್ ಚಿದಾನಂದ, ಪ್ರಾಚಾರ್ಯ ಪ್ರೊ. ಉಮೇಶ, ಡಾ. ಎಂ. ಪ್ರಭು, ಶ್ರೀ ಶ್ರೀನಿವಾಸ್ ಹಾಗೂ ಶ್ರೀ ಬಿ. ಮಂಜುನಾಥ್ ರವರನ್ನು ಕಾಣಬಹುದು.




ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರುಗಳು



